# <u>ದಿವಾಣಿ ನ್ಯಾಯಾಲಯ ಮತ್ತು ಜೆ. ಎಮ್. ಎಫ್. ಸಿ. ನ್ಯಾಯಾಲಯ, ಜೇವರ್ಗಿ</u>

## <u>ಸಿಸಿ ನಂ.36/2021</u>

**<u>ಚಾಸಾ-7/ಪಿಡಬ್ಲೂ -4</u>**

| | |
|---|---|
| **ಹೆಸರು** | ವನಿತಾ |
| **ಗಂಡನ ಹೆಸರು** | ಶರಣಬಸಪ್ಪ |
| **ವಯಸ್ಸು** | 43 ವರ್ಷಗಳು |
| **ಉದ್ಯೋಗ** | ಅಬಕಾರಿ ನಿರೀಕ್ಷಕರು |
| **ವಾಸ ಸ್ಥಳ** | ಖಜೂರ ಚೆಕಪೋಸ್ಟ |

**<u>ಸಾಕ್ಷಿಯನ್ನು ದಿನಾಂಕ 23.10.2024 ರಂದು ಕರೆಯಿಸಿ ಪ್ರಮಾಣ ವಚನ ಭೋಧಿಸಲಾಯಿತು.</u>**

**<u>ಮುಖ್ಯ ವಿಚಾರಣೆಃ ಸಹಾಯಕ ಸರ್ಕಾರಿ ಅಭೀಯೋಜಕರಿಂದ.</u>**

ಜುಲೈ 2019 ರಿಂದ ಅಗಷ್ಟ 2023 ರವರೆಗೆ ಅಬಕಾರಿ ಉಪ ನಿರಿಕ್ಷಕನಾಗಿ ಜೇವರ್ಗಿಯಲ್ಲಿ ಕರ್ತವ್ಯ ನಿರ್ವಹಿಸಿರುತ್ತೇನೆ.

ದಿನಾಂಕ 19.04.2020 ರಂದು ಈ ಪ್ರಕರಣದ ಕಡತವನ್ನು ಚಾಸಾ-1 ರವರಿಂದ ಪಡೆದು ಸದರಿ ಪ್ರಕರದಲ್ಲಿ ಜಪ್ತಿಯಾದ ವಾಹನ ನಂ.ಕೆಎ-35/ಎ-8953 ರ ಮಾಲಿಕತ್ವದ ವಿವರ ಹಾಗೂ ಅದರ ಮೌಲ್ಯಮಾಪನಕ್ಕಾಗಿ RTO Kalaburagi ಪತ್ರ ಬರೆದಿರುತ್ತೇನೆ. ಸಾಕ್ಷಿ ಸದರಿ ಪತ್ರವನ್ನು ನೋಡಿ ಗುರುತಿಸಿದ್ದು ಅದನ್ನು ನಿಪಿ-2 ಎಂದು, ಸಾಕ್ಷಿ ಸಹಿಯನ್ನು ನಿಪಿ-2(ಎ) ಎಂದು ಗುರುಸಲಾಯಿತು. ಸಾಕ್ಷಿ B Extract ನ್ನು ನೋಡಿ ಗುರುತಿಸಿದ್ದು ಅದನ್ನು ನಿಪಿ-3 ಎಂದು ಸಾಕ್ಷಿ ಸಹಿಯನ್ನು ನಿಪಿ-3(ಎ) ಎಂದು ಗುರುಸಲಾಯಿತು. ಸಾಕ್ಷಿ RC book ನ್ನು ನೋಡಿ ಗುರುತಿಸಿದ್ದು ಅದನ್ನು ನಿಪಿ-4 ಎಂದು ಗುರುಸಲಾಯಿತು. ಸಾಕ್ಷಿ ಸಹಿಯನ್ನು ನಿಪಿ-4(ಎ) ಎಂದು ಗುರುಸಲಾಯಿತು. ಸದರಿ ವಾಹನದ ಮಾಲಿಕ ಆರೋಪಿ ಇರುತ್ತಾನೆ. ದಿನಾಂಕ 24.07.2020 ರಂದು ಪ್ರಕರಣದಲ್ಲಿ ವಶಪಡಿಸಿಕೊಂಡ ಮುದ್ದೆಮಾಲಗಳನ್ನು FSL ವರದಿಗಾಗಿ ಚಾಸಾ-4 ರವರ ಮುಖಾಂತರ ಕಳುಹಿಸಿರುತ್ತೇನೆ. ಸಾಕ್ಷಿ FSL ಗಾಗಿ ಕಳಿಸಿದ ಪತ್ರವನ್ನು ನೋಡಿ ಗುರುತಿಸಿದ್ದು ಅದನ್ನು ನಿಪಿ-5 ಎಂದು ಸಾಕ್ಷಿ ಸಹಿಯನ್ನು ನಿಪಿ-5(ಎ) ಎಂದು ಗುರುಸಲಾಯಿತು. ದಿನಾಂಕ 25.07.2020 ರಂದು FSL ವರದಿ ಪಡೆದಿರುತ್ತೇನೆ. ಸಾಕ್ಷಿ FSL ವರದಿಯನ್ನು ಗುರುತಿಸಿದ್ದು ಅದನ್ನು ನಿಪಿ-6 ಎಂದು ಗುರುಸಲಾಯಿತು. ದಿನಾಂಕ 25.07.2020 ರಂದು ಚಾಸಾ-4 ರವರ ಹೇಳಿಕೆ ಪಡೆದಿರುತ್ತೇನೆ. ದಿನಾಂಕ 17.07.2020 ರಂದು ಚಾಸಾ-5 ರವರನ್ನು ಆರೋಪಿ ಪತ್ತೆ ಕುರಿತು ನಿಯೋಜಿಸಿರುತ್ತೇನೆ. ಸಾಕ್ಷಿ ನಿಯೋಜನೆ ಪತ್ರಗಳನ್ನು ನೋಡಿ ಗುರುತಿಸಿದ್ದು ಅದನ್ನು ನಿಪಿ-7 ಎಂದು ಗುರುಸಲಾಯಿತು. ದಿನಾಂಕ 24.07.2020 ಮತ್ತು 14.08.2020 ರಂದು ಚಾಸಾ-5 ರವರಿಂದ ಅರೋಪಿ ಪತ್ತೆ ಕುರಿತು ವರದಿಗಳನ್ನು ಪಡೆದಿರುತ್ತೇನೆ. ಸಾಕ್ಷಿ ಸದರಿ ವರದಿಗಳ್ಳು ನೋಡಿ ಗುರುತಿಸಿದ್ದು ಅದನ್ನು ನಿಪಿ-8 ಮತ್ತು 9 ಎಂದು ಗುರುಸಲಾಯಿತು.

ದಿನಾಂಕ 19.09.2020 ರಂದು ತನಿಖೆ ಮುಗಿಸಿ ಆರೋಪಿ ವಿರುದ್ದ ಆರೋಪ ಸಾಬಿತ್ತಾದ್ದರಿಂದ ಮಾನ್ಯ ನ್ಯಾಯಾಲಯಕ್ಕೆ ದೋಷಾರೋಪಣಾ ಪಟ್ಟಿಯನ್ನು ಸಲ್ಲಿಸಿರುತ್ತೇನೆ.

**<u>ಪಾಟೀ ಸವಾಲುಃ ಆಪಾದಿತರ ಪರ ವಕೀಲರಿಂದ:</u>**

ಚಾಸಾ-1 ರವರ ಮಾತು ಕೇಳಿ ಸುಳ್ಳು ಪ್ರಕರಣ ದಾಖಲು ಮಾಡಿದ್ದೇನೆ ಎಂದರೆ ಸರಿಯಲ್ಲ.

ದಿನಾಂಕ 19.04.2020 ರಂದು ಈ ಪ್ರಕರಣದ ಕಡತವನ್ನು ಚಾಸಾ-1 ರವರಿಂದ ಪಡೆದು ಸದರಿ ಪ್ರಕರದಲ್ಲಿ ಜಪ್ತಿಯಾದ ವಾಹನ ನಂ.ಕೆಎ-35/ಎ-8953 ರ ಮಾಲಿಕತ್ವದ ವಿವರ ಹಾಗೂ ಅದರ ಮೌಲ್ಯಮಾಪನಕ್ಕಾಗಿ RTO Kalaburagi ಪತ್ರ ಬೆರೆದು, ದಿನಾಂಕ 24.07.2020 ರಂದು ಪ್ರಕರಣದಲ್ಲಿ ವಶಪಡಿಸಿಕೊಂಡ ಮುದ್ದೆಮಾಲಗಳನ್ನು FSL ವರದಿಗಾಗಿ ಚಾಸಾ-4 ರವರ ಮುಖಾಂತರ ಕಳುಹಿಸಿ ದಿನಾಂಕ 25.07.2020 ರಂದು FSL ವರದಿ ಪಡೆದು, ದಿನಾಂಕ 25.07.2020 ರಂದು ಚಾಸಾ-4 ರವರ ಹೇಳಿಕೆ ಪಡೆದು, ಚಾಸಾ-5 ರವರನ್ನು ಆರೋಪಿ ಪತ್ತೆ ಕುರಿತು ನಿಯೋಜಿಸಿರುತ್ತೇನೆ ಎಂದು ಸುಳ್ಳು ಸಾಕ್ಷಿ ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ. ಆರೋಪಿ ವಿರುದ್ದ ಯಾವುದೇ ಆರೋಪ ಸಾಬಿತಾಗದೆ ಇದ್ದರು ಸಹ ಸುಳ್ಳು ದೋಷಾರೋಪಣಾ ಪಟ್ಟಿ ಸಲ್ಲಿಸಿದ್ದೇನೆ ಎಂದರೆ ಸರಿಯಲ್ಲ.

<u>ಮರುವಿಚಾರಣೆಃ ಇಲ್ಲ.</u>

(ತೆರೆದ ನ್ಯಾಯಾಲಯದಲ್ಲಿ ಸಾಕ್ಷಿದಾರರ ಹೇಳಿಕೆಯನ್ನು ಸಾಕ್ಷಿದಾರರು ಹೇಳಿದಂತೆ ನನ್ನ ಉಕ್ತ ಲೇಖನಕ್ಕೆ ಕಂಪ್ಯೂಟರ್ ನಲ್ಲಿ ಬೆರಳಚ್ಚು ಮಾಡಿಸಲಾಯಿತು.)

ಓ. ಹೇ.ಕೇ. ಸರಿ ಇರುತ್ತದೆ

ಜೆ.ಎಮ್.ಎಫ್.ಸಿ.
ಜೇವರ್ಗಿ